International Journal of Kannada Research
www.kannadajournal.com

ISSN: 2454–5813
IJKR 2022; 8(3): 22-25
© 2022 IJKR
www.kannadajournal.com
Received: 28-05-2022
Accepted: 30-06-2022

**Laxmi S Angadi**
Ph.D. Student Final,
Department of Kannada, ,
Karnataka State Akkamahadevi
Women's University Vijayapur,
Karnataka, India

**Corresponding Author:**
**Laxmi S Angadi**
Ph.D. Student Final,
Department of Kannada, ,
Karnataka State Akkamahadevi
Women's University Vijayapur,
Karnataka, India

# ಆಧುನಿಕ ಮಹಾಕಾವ್ಯಗಳಲ್ಲಿ ಬಸವಣ್ಣ

**Laxmi S Angadi**

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ಬಸವಣ್ಣನವರನ್ನು ಕಾವ್ಯದ ವಸ್ತುವಾಗಿಸಿಕೊಂಡು ಅನೇಕ ಮಹಾಕಾವ್ಯಗಳು ಬಂದಿವೆ. ಕನ್ನಡದಲ್ಲಿ ಒಟ್ಟು 7 ಆಧುನಿಕ ಮಹಾಕಾವ್ಯಗಳಿದ್ದು ಶ್ರೀ ಬಸವೇಶ್ವರ ತುಪ್ಪದ ಅವರ "ಶ್ರೀ ಬಸವದರ್ಶನಂ" ಡಾ॥ ಆರ್.ಸಿ.ಮುದ್ದೇಬಿಹಾಳವರ "ಬಸವ ಬೆಳಗು", ಶ್ರೀ ನಿರುಪಾಧೀಶ ಸ್ವಾಮೀಜಿ ಮರೆಗುದ್ದಿಯವರ "ಶ್ರೀ ಸಂಗನಬಸವ ವಿಜಯ" ಡಾ.ಪ್ರದೀಪಕುಮಾರ ಹೆಬ್ರಿಯವರ "ಯುಗಾವತಾರಿ" ಲತಾ ರಾಜಶೇಖರವರ "ಬಸವ ಮಹಾದರ್ಶನ" ಜಿ.ಎಚ್. ಹನ್ನೆರಡಮಠರವರ "ಶ್ರೀ ಬಸವ ಕಾವ್ಯ ದರ್ಶನ" ಬಿ.ಸಿದ್ಧಗಂಗಯ್ಯ ಕಂಬಾಳರ "ಬಸವ ದರ್ಶನ" ಈ ಎಲ್ಲಾ ಮಹಾಕಾವ್ಯಗಳಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಬಹುಮುಖ ನೆಲೆಯಲ್ಲಿ ಕಂಡರಿಸಲಾಗಿದೆ.

ಶ್ರೀ ಬಸವೇಶ್ವರ ತುಪ್ಪದವರ 'ಶ್ರೀ ಬಸವ ದರ್ಶನಂ' ಮಹಾಸಭಂದಸ್ಸಿನಲ್ಲಿ ರಚಿತವಾದ ಹದಿನೆಂಟು ಸಂಧಿಗಳನ್ನು ಒಳಗೊಂಡಿದೆ. ಇದು ಬಸವಣ್ಣನವರ ಮಹಾಜೀವನ ಮತ್ತು ತತ್ವಗಳನ್ನು ಒಡಮೂಡಿಸಿದ ಕಾವ್ಯಕೃತಿಯಾಗಿದೆ. ಕಾವ್ಯದ ಪ್ರಾರಂಭದಲ್ಲಿ ಹಿರಿಯ ಕವಿಗಳಂತೆ ಯಾವುದೇ ದೇವತೆಗಳನ್ನು ಸ್ಮರಿಸದೆ ನೇರವಾಗಿ ತಾವು ಶ್ರದ್ಧೆಯಿಟ್ಟ ಧಾರವಾಡದ ಮುರುಘಾಮಠದ ಶ್ರೀಗಳನ್ನು ನೆನೆದಿದ್ದಾರೆ. 'ಶ್ರೀ ಗುರು ಬಸವಲಿಂಗಾಯನಮಃ' ಎಂಬ ವಾಕ್ಯದಿಂದಲೇ ಕಾವ್ಯ ಆರಂಭಗೊಂಡಿದೆ. ಪ್ರತಿಯೊಂದು ಅಧ್ಯಾಯದಲ್ಲಿ ಹೊಸತನವಿದೆ. ಈ ಕಾವ್ಯಕೃತಿಗೆ ಅನುಭಾವ ಸಾಹಿತ್ಯ ಮತ್ತು ಶೂನ್ಯ ಸಂಪಾದನೆಯ ಪ್ರಸಂಗಗಳು ಪ್ರೇರಣೆಯಾಗಿವೆ. ವಚನಗಳ ಪ್ರಭಾವವಿದೆ. ಹನ್ನೆರಡನೆಯ ಶತಮಾನದ ಶರಣರ ಭವ್ಯ ಬದುಕಿನ ಸಾಧನೆಗೆ ಶ್ರದ್ಧೆ, ನಿಷ್ಠೆಗಳೇ ಕಾರಣವಾಗಿವೆ. 'ನಂಬಿ ನೆಚ್ಚಿ ಕರೆದಡೆ ಓ ಎನ್ನನೇ ಆ ಶಿವನು'ಎಂಬ ಶರಣವಾಣಿಯನ್ನು ಚಿತ್ತರಿಸಿದ್ದಾರೆ. ಬಸವಣ್ಣನವರ 'ಲಿಂಗಪೂಜೆ'ಯನ್ನು ಕವಿ ಸೊಗಸಾಗಿ ಚಿತ್ರಿಸಿದ್ದಾರೆ. ಈ ಲಿಂಗ ಸಂಸ್ಕಾರವೇ ಅವರ ವಿಶ್ವವಿಭೂತಿಯನ್ನಾಗಿಸಿತು ಎಂದು ಕವಿ ತಿಳಿಸಿದ್ದಾರೆ. ಬಸವಣ್ಣನವರು ನಿರೂಪಿಸಿದ ಕಾಯಕ ದಾಸೋಹ ತತ್ವಗಳು, ಕಾವ್ಯದುದ್ದಕ್ಕೂ ಮೂಡಿಬಂದಿವೆ. "ಆಧ್ಯಾತ್ಮದಾಧಾರ ಮೂಲಮೇ ಪೆಣ್ಬಲಂ ಪೆಣ್ ಗಂಡಿಗೊಂದೇ ಮಹಾಮಂತ್ರೋಪದೇಶ ಒಂದೇ ಸಂಸ್ಕಾರ ಒಂದೇ ಬೃಹತ್ ಜೀವನಂ" ಹೆಣ್ಣು-ಗಂಡು ಬೇರೆಯಲ್ಲಾ ಒಳಗಿರುವ ಆತ್ಮವೋ ಹೆಣ್ಣು ಅಲ್ಲ, ಗಂಡೂ ಅಲ್ಲ ಎಂಬ ಸತ್ಯವನ್ನು ಪ್ರತಿಪಾದಿಸಿದ ಮಹಾನ್ ಸುಧಾರಕರು ಬಸವಣ್ಣ ಎಂದು ಕವಿ ಕೊಂಡಾಡಿದ್ದಾರೆ. ಸ್ತ್ರೀಗೆ ಸರ್ವಕ್ಷೇತ್ರದಲ್ಲಿ ಮುಕ್ತವಾದ ಅವಕಾಶ ದೊರೆತಿದೆ. ಸ್ತ್ರೀಯು ಪ್ರಕೃತಿ ಉತ್ಪತ್ತಿಯ ಮೂಲಳಾಗಿದ್ದು, ಪುರುಷನಷ್ಟೇ ಮಹತ್ವಳಾಗಿದ್ದಾಳೆ. ಇದಕ್ಕೆ ತಾಯಿ ಮಾದಲಾಂಬಿಕೆ, ವೈರಾಗ್ಯನಿಧಿ ಅಕ್ಕಮಹಾದೇವಿಯನ್ನು ಉದಾಹರಣೆಗಾಗಿ ಚಿತ್ರಿಸಲಾಗಿದೆ. ಸ್ತ್ರೀ ಸಮಾನತೆಯ ವಿಚಾರಗಳು ಬಸವಣ್ಣನವರಲ್ಲಿ ಬಾಲ್ಯದಲ್ಲಿಯೇ ಮನೆಮಾಡಿಕೊಂಡಿದ್ದವೆಂಬುದು ಸ್ಪಷ್ಟವಾಗಿ ಈ ಕಾವ್ಯದಲ್ಲಿ ಮೂಡಿಬಂದಿದೆ. ಹಂತ ಹಂತವಾಗಿ ಬಸವಣ್ಣನವರು ಸಮಾಜದಲ್ಲಿಯ ಅಜ್ಞಾನ ಮೂಢನಂಬಿಕೆಗಳನ್ನು ತೊಡೆದು ಹಾಕುತ್ತಾ ಬಂದರು. ಮಹಿಳೆಯರಿಗೆ ಸ್ವಾತಂತ್ರ್ಯ ಸಮಾನತೆಯನ್ನು ತಂದರು. ಲೀಲಾ ಪರ್ಯಟನ ಮೂಲಕ ಲಿಂಗದೀಕ್ಷೆ ನೀಡಿದರು. ಕಲ್ಯಾಣದಲ್ಲಿ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆಗಳನ್ನು ತರುತ್ತಾರೆ. ಬಸವಣ್ಣನವರು ಅಳವಡಿಸಿದ ಆರ್ಥಿಕ ಸುಧಾರಣೆಗಳನ್ನು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. 'ಕಾಯಕವೇ ಕೈಲಾಸ' ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ, ಎಂದು ಸಾರಿದರು. ಬೇರೆ ಬೇರೆ ಊರುಗಳಿಗೆ ಭೇಟಿ ನೀಡಿ ಶರಣ ಧರ್ಮವನ್ನು ಭದ್ರಗೊಳಿಸಿದರು. ಈ ವಿಚಾರದಲ್ಲಿ ಬಸವಣ್ಣನವರ ಪಾತ್ರವನ್ನು ಹಿರಿದಾಗಿ ಕವಿ ಕಂಡರಿಸಿದ್ದಾರೆ.

ಸಾರ್ವಕಾಲಿಕ ಮೌಲ್ಯಗಳಾದ ಸಾಮಾಜಿಕ ಸಮಾನತೆ, ಸಹಕಾರ, ಧಾರ್ಮಿಕ ಸ್ವಾತಂತ್ರ್ಯದಂತಹ ಮೌಲ್ಯಗಳನ್ನು ಕವಿ ಬಸವಣ್ಣನವರ ಮೂಲಕ ಚಿತ್ತರಿಸಿದ್ದಾರೆ. ಇಷ್ಟಲಿಂಗದ ಕಲ್ಪನೆಯು ಮುಖಾಂತರ

ಸಮಾಜದಲ್ಲಿಯ ಜಾತಿ ಎಂಬ ಭೂತವನ್ನು ನಿವಾರಣೆ ಮಾಡಲು ಸಾಧನವಾಯಿತು. ಇಷ್ಟಲಿಂಗಧಾರಣೆಯಿಂದ ಸಮಾಜದಲ್ಲಿ ಸಮಾನತೆ ಸಹಬಾಳವೆ ನಿರ್ಮಾಣವಾದದ್ದು ಅಪರೂಪದ ಸಂಗತಿಯಾಗಿದೆ. ಕಾಯಕ–ದಾಸೋಹದಂತಹ ಸಿದ್ಧಾಂತಗಳಿಂದ ಸಮಾಜದಲ್ಲಿ ಶಾಂತಿ ಸಮೃದ್ಧಿ ಸ್ಥಾಪಿಸಿದ್ದು ಬಸವಾದಿ ಶರಣರ ಹೆಗ್ಗಳಿಕೆಯಾಗಿದೆ. ಸರ್ವರಿಗೂ ಒಂದೇ ಧರ್ಮ. ಅದು 'ಶರಣ ಧರ್ಮ' ಎಂದು ಕವಿ ಬಸವಣ್ಣನವರ ಮೂಲಕ ಪ್ರತಿಪಾದಿಸುತ್ತಾರೆ. ಬಸವರಾಜ ತುಪ್ಪದವರು ಬಸವಣ್ಣನವರ ವ್ಯಕ್ತಿತ್ವವನ್ನು ವಿವಿಧ ನೆಲೆಯಲ್ಲಿ ಕಟ್ಟಿಕೊಡುತ್ತಾ ಹೋಗಿದ್ದಾರೆ. ಬಸವಣ್ಣನವರನ್ನು 'ವಿಷಕಂಠನವತಾರಿ' ಎಂದು ಕರೆದಿದ್ದಾರೆ. ಬಸವಣ್ಣನವರ ವ್ಯಕ್ತಿತ್ವಕ್ಕೆ ಪೂರಕವಾಗಿ ಹಿತಮಿತವಾದ ನೆಲೆಯಲ್ಲಿ ವೀರಶೈವ ಸಾಂಸ್ಕೃತಿಕ ವಿವರಗಳನ್ನು ದಾಖಲಿಸಿದ್ದಾರೆ. ವೀರಶೈವಧರ್ಮವು ವಿಶ್ವಧರ್ಮವಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಬಸವಣ್ಣನವರ ಸಾಧನಾ ಸಿದ್ಧಿಗಳಿಗೆ ಕಾರಣಿಕರಾದವರನ್ನು ಸ್ಮರಿಸುತ್ತಾರೆ.

ಡಾ.ಆರ್.ಸಿ. ಮುದ್ದೇಬಿಹಾಳವರ 'ಬಸವ ಬೆಳಗು'. ಇಪ್ಪತ್ತೊಂಭತ್ತು ಸಂಧಿಗಳನ್ನು ಒಳಗೊಂಡಿದೆ. ಕವಿ ಬೆಳಗಾಗಿ ಎದ್ದು ಬಸವಾದಿ ಶರಣರನ್ನು ನೆನೆದರೆ ಕಷ್ಟಗಳು ದೂರಾಗುತ್ತವೆ. ಅರಿವು ಆಚಾರ ಮೂಡುತ್ತದೆ ಎಂದು ತಿಳಿಸಿದ್ದಾರೆ. ಕಾವ್ಯಕ್ಕೆ ಗಂಗೋತ್ರಿ ಎನಿಸಿದ 'ತ್ರಿಪದಿ' ಛಂದಸ್ಸಿನಲ್ಲಿ 'ಬಸವ ಬೆಳಗು' ಮಹಾಕಾವ್ಯ ರಚಿಸಿದ್ದಾರೆ. ಕವಿ ಸರ್ವಜ್ಞನ ಪ್ರಭಾವಕ್ಕೆ ಒಳಗಾಗಿದ್ದಾರೆ. ಲೋಕನಾಯಕ ಬಸವಣ್ಣನು ಲೋಕ ಸೇವಕನಾಗಿ ಶರಣರಾದವರಿಗೆ ಇಷ್ಟಲಿಂಗ ದೀಕ್ಷೆಯನ್ನು ನೀಡಿದನು. ಕೊಟ್ಟು ಕಾಯಕದ ಸರಳ ಮಾರ್ಗದಲ್ಲಿ ನಡೆಯುವಂತೆ ಮಾಡಿದನೆಂದು ಕಂಡರಿಸಿದ್ದಾರೆ. ಈ ಕಾವ್ಯದಲ್ಲಿ ಬಸವಣ್ಣನವರು ಹೆಚ್ಚಾಗಿ ಸಮಾಜ ಮತ್ತು ಧಾರ್ಮಿಕ ಸುಧಾರಕರಾಗಿ ಕಂಡುಬರುತ್ತಾರೆ. ಅವರ ಸಾಮಾಜಿಕ ಬದಲಾವಣೆಗಳು ಆಧುನಿಕ ಕಾಲಘಟ್ಟದ ಸಮಸ್ಯೆಗಳಿಗೆ ಪರಿಹಾರಗಳಾಗಿವೆ. ಅವರ ಆರ್ಥಿಕ ಚಿಂತನೆಗಳು ವರ್ತಮಾನದ ಆರ್ಥಿಕ ವ್ಯವಸ್ಥೆಗೆ ಸಹಾಯಕಾರಿಯಾಗಿವೆ. ಮನುಷ್ಯಜೀವಿ ಯಾವ ರೀತಿ ಬದಕಬೇಕೆಂದು ಬಸವಣ್ಣನವರು ಮೂಲಕ ತಿಳಿಸಿಕೊಟ್ಟಿದ್ದಾರೆ. ಸ್ವತಂತ್ರ್ಯ, ಲಿಂಗಸಮಾನತೆ, ಅಹಿಂಸಾತತ್ವ, ಕಾಯಕವೇ ಕೈಲಾಸ, ದಾಸೋಹದ ಮಹತ್ವ ಜಂಗಮರ ಸೇವೆ, ಇಷ್ಟಲಿಂಗ ಪೂಜೆ ಈ ಎಲ್ಲಾ ವಿಚಾರಗಳ ಕುರಿತು ಕವಿ ಕಾವ್ಯದಲ್ಲಿ ದಾಖಲಿಸಿದ್ದಾರೆ. ಬಸವಣ್ಣನವರ ವ್ಯಕ್ತಿತ್ವದ ಜೊತೆಗೆ ಅನೇಕ ಹಿರಿಯ ಶರಣರ ವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ. 'ಶರಣ ಧರ್ಮದ' ಮಹತ್ವ ಸಾರಿದ್ದಾರೆ. ಬಸವಾದಿ ಶರಣರ ಮಾನವೀಯ ಮೌಲ್ಯಗಳನ್ನು ವಚನಗಳ ಆಧಾರದ ಮೇಲೆ ಕಟ್ಟಿಕೊಟ್ಟಿದ್ದಾರೆ. ಬಸವಣ್ಣನವರೊಂದಿಗೆ ನೀಲಾಂಬೆ–ಗಂಗಾಂಬೆಯರ ಸಾರ್ಥಕ ಬದುಕನ್ನು ಚಿತ್ರಿಸಿದ್ದಾರೆ. ಬಸವಣ್ಣನವರ ವ್ಯಕ್ತಿತ್ವದ ಹಿರಿಮೆಯ ಹಿಂದೆ ನೀಲಾಂಬೆ–ಗಂಗಾಂಬೆಯರ ಪಾತ್ರವು ಹಿರಿದಾದು ಎಂದು ಅರ್ಥೈಸಿದ್ದಾರೆ.

ಕವಿ ಸ್ತ್ರೀ ಪರಚಿಂತನೆಗಳನ್ನು ಬಸವಣ್ಣನವರ ಮೂಲಕ ಭಿತ್ತರಿಸಿದ್ದಾರೆ. ಕಾವ್ಯದಲ್ಲಿ ಕವಿ ಬಸವಣ್ಣನವರ ಪಾತ್ರವನ್ನು ಎಲ್ಲಿ0ಯೂ ಕೈಬಿಡದೆ, ಅವರ ಮಾರ್ಗದರ್ಶನದಲ್ಲಿಯೇ ಎಲ್ಲವನ್ನು ರೂಪಿಸುತ್ತಾ ಹೋಗಿದ್ದಾರೆ. ಕವಿ ಬಸವಣ್ಣನವರ ಹಾಗೆ ಉಳಿದೆಲ್ಲ ಶರಣರನ್ನು ಗೌರವಿಸಿದ್ದು ಎದ್ದು ಕಾಣುತ್ತದೆ. ಒಟ್ಟಾರೆಯಾಗಿ ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು, ಶರಣ ಧರ್ಮವನ್ನು ಲೋಕಕ್ಕೆ ತಿಳಿಸುವುದು ಕವಿಯ ಆಶಯವಾಗಿದೆ.

ನಿರುಪಾಧೀಶ ಸ್ವಾಮಿಗಳ 'ಶ್ರೀ ಸಂಗನಬಸವ ವಿಜಯ'. ಶರಣರ ಸಾಹಿತ್ಯವನ್ನು ಸಾಕಷ್ಟು ಅಧ್ಯಯನ ಮಾಡಿ ಅವರ ನಡೆ ನುಡಿ ಸಿದ್ಧಾಂತವನ್ನು ಅಳವಡಿಸಿಕೊಂಡು ಬದುಕುತ್ತಿರುವ ಅಪರೂಪದ ಶರಣರು. 'ನಿನ್ನೊಡವೆ ಎಂಬುದು ಜ್ಞಾನರತ್ನ' ಎಂಬ ಅಲ್ಲಮನ ವಚನದ ಸಾರವನ್ನು ಹೋಲುವ ಸರಳ–ಸಜ್ಜನಿಕೆಯ ಸಾಕಾರ ಮೂರ್ತಿ ನಿರುಪಾಧೀಶರು. ಕವಿ ಈ ಕಾವ್ಯಕೃತಿಯನ್ನು ಶೂನ್ಯ ಪೀಠದ ಅಧ್ಯಕ್ಷ ಅಲ್ಲಮ ಪ್ರಭುದೇವರಿಗೆ ಅರ್ಪಿಸಿದ್ದಾರೆ.

'ತಾಳ ಮಾನಸವನರಿಯೆ, ಓಜೆ, ಬಜಾವಣೆಯ ಲೆಕ್ಕವನರಿಯೆ' ಎಂಬ ಬಸವಣ್ಣನವರ ವಚನದಿಂದಲೇ ಕಾವ್ಯ ಆರಂಭವಾಗುತ್ತದೆ. ಈ ಕಾವ್ಯ 25 ಸಂಧಿ 1001 ಭಾಮಿನಿ ಷಟ್ಪದಿಗಳನ್ನೊಳಗೊಂಡಿದೆ. 200 ವಚನಗಳನ್ನು ಕವಿ ಬಳಸಿಕೊಂಡಿದ್ದಾರೆ. ಕಾವ್ಯದ ಆರಂಭದಲ್ಲಿ ಬಸವ ಪೂರ್ವಯುಗದ ರಾಜಕೀಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವಿಹಂಗಮ ನೋಟದ ಸಮರ್ಥ ಚಿತ್ರಣವಿದೆ. ಮಾದರಸ ಮಾದಲಾಂಬಿಕೆಯರ ಸಾತ್ವಿಕ ಜೀವನ, ಅಗ್ರಹಾರದ ಪರಿಸರ, ಬಸವನ ಜನನ, ಬಾಲ್ಯ, ಶಿಕ್ಷಣ, ಅಕ್ಕನಾಗಮ್ಮನ ಮದುವೆ, ಬಸವಯಾತ್ರೆ ಎಲ್ಲವೂ ಸ್ವಾರಸ್ಯಕರವಾಗಿ ಮೂಡಿಬಂದಿವೆ. ಬಸವನ ಮದುವೆ, ತಾಮ್ರಪಟ ಓದಿದ ಬಸವ, ನಾಗಾಯಿ ತಾಯಿ ಜತೆ ಸಾಮಾಜಿಕ ಚಿಂತನೆ, ಲಿಂಗದೀಕ್ಷೆ ನೀಡುವುದು, ಶೂದ್ರತೆಯ ಬಗ್ಗೆ ಬಿಜ್ಜಳನೊಂದಿಗೆ ಚರ್ಚೆ, ಅನುಭವ ಮಂಟಪದ ಚಿತ್ರಣ ಎಲ್ಲವೂ ಆಧುನಿಕ ಸಮಾಜದ ಹಿನ್ನಲೆಯಲ್ಲಿ ಅರಳಿದಂತಿವೆ.

ಪುರೋಹಿತಶಾಹಿಗಳ ಪಿತೂರಿ, ಜಂಗಮರಿಗಾಗಿ ರಾಜಭಂಡಾರ ಬಳಸಿಕೊಂಡ ಆರೋಪ, ಲೋಕಸಂಚಾರ ಮಾಡುತ್ತ ಬಸವನ ಮಹಾಮನೆಗೆ ಬಂದ ಅಲ್ಲಮಪ್ರಭು, ಸಿದ್ಧರಾಮನ ಈ ಸಂಗತಿ ಎಲ್ಲಾ ಕಾವ್ಯಗಳಲ್ಲಿ ಚಿತ್ರಿತಗೊಂಡಿದೆ. ಆಗಮನ ಬಸವನ ಭಕ್ತಿ ಪರೀಕ್ಷೆ, ಸಿದ್ಧಾರಮನ ಲಿಂಗದೀಕ್ಷೆ ಮಹಾದೇವಿಯಕ್ಕನ ಬರುವು ಎಲ್ಲವೂ ಅಭಿವ್ಯಕ್ತಗೊಂಡಿದೆ. ಅನುಭವ ಮಂಟಪದಲ್ಲಿ ಸ್ಥಾಪನೆಗೊಂಡ ಶೂನ್ಯ ಪೀಠಾರೋಹಣ, ಹರಳಯ್ಯ ಮಧುವರಸರ ಸಂಬಂಧ, ಬಿಜ್ಜಳನ ಮುನಿಸು, ಬಸವಣ್ಣನ ನಿರ್ಭಿತ ನಡೆ ನುಡಿ. ಅಧಿಕಾರ ತ್ಯಜಿಸುವುದು ಈ ಮೊದಲಾದ ಸನ್ನಿವೇಶಗಳು ಮಾನವೀಯತೆಯ ಪರಾಕಾಷ್ಠೆ ಮೀರುವಂತೆ ಚಿತ್ರಣಗೊಂಡಿವೆ.

ಮಾತಿಗೆ ಕಾವ್ಯದ ಸ್ಪರ್ಶ ನೀಡಿದವರು ಶರಣರು. ಪಾಮರರೆಂದು ಉಪೇಕ್ಷೆಗೊಳಗಾದ ಸಾಹಿತ್ಯವನ್ನು ಪಾರಮ್ಯಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇಂತಹ ಶರಣ ನಾಯಕನ ವಸ್ತು ಹಳೆಯದಾದರೂ ಸಮಕಾಲೀನ ಸಂದರ್ಭದಲ್ಲಿ ಅವರನಿಟ್ಟು (ಸ್ತ್ರೀ ಸಂವೇದನೆ ನ್ಯಾಯಾಂಗ ಚಿತ್ರಣ, ಪರಿಸರ ಪ್ರಜ್ಞೆ) ನೋಡಿರುವುದು ಈ ಕಾವ್ಯದ ಹೆಚ್ಚುಗಾರಿಕೆಯಾಗಿದೆ. ಬಸವಣ್ಣನವರ ಬಗ್ಗೆ ಹಿಂದಿನ ಕವಿಗಳು ಬಣ್ಣಿಸಿದ ಪವಾಡ, ಚರಿತ್ರೆಗಳನ್ನು ಒಡೆಯದೆ, ಅವುಗಳನ್ನು ವಾಸ್ತವದ ನೆಲೆಗಟ್ಟಿನ ಮೇಲೆ ಬಿಚ್ಚಿಡುವ ನಿರುಪಾಧೀಶರು ಬಸವಣ್ಣನವರ ಹಿರಿಮೆಗೆ ಭಾದಕವಿಲ್ಲ ಎಂಬುದನ್ನು ಅತ್ಯಂತ ಸೊಗಸಾಗಿ ಮತ್ತು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ.

ಡಾ. ಪ್ರದೀಪಕುಮಾರ ಹೆಬ್ರಿಯವರ 'ಯುಗಾವತಾರಿ'. ಒಂದು ಲಕ್ಷಕ್ಕಿಂತಲೂ ಹೆಚ್ಚು ಸಾಲುಗಳನ್ನು ಒಳಗೊಂಡ, ನಾಲ್ಕು ಸಾವಿರದ ಐದುನೂರ ಪುಟಗಳನ್ನು ಒಳಗೊಂಡ, ಆರು ಸಂಪುಟಗಳನ್ನೊಳಗೊಂಡಂತ ಒಂದು ಬೃಹತ್ ಮಹಾಕಾವ್ಯವಾಗಿದೆ. 'ಯುಗಾವತಾರಿ' ಎನ್ನುವುದು ಒಟ್ಟು ಶೀರ್ಷಿಕೆಯಾಗಿದೆ. ಉಪಶೀರ್ಷಿಕೆಯಾಗಿ 'ಶ್ರೀ ಬಸವದರ್ಶನ ಕಾವ್ಯ' ಎಂಬುದಾಗಿದೆ. ಆರು ಸಂಪುಟಗಳು ಬಸವಣ್ಣನವರ ಬಾಲ್ಯದಿಂದ ಐಕ್ಯದವರೆಗಿನ ಎಲ್ಲ ಕಥಾ ವಸ್ತುವನ್ನು ಬಿಂಬಿಸುತ್ತವೆ.

ಬಸವಣ್ಣನವರು ಹೇಳುವ 'ಮರ್ತ್ಯಲೋಕ'ವೆಂಬುದು 'ಕರ್ತಾರನ ಕಮ್ಮಟವಯ್ಯ' ಎನ್ನುವಂಥ ಮಾತಿದೆ. ಆ ಕರ್ತಾರನ ಕಮ್ಮಟವನ್ನು ತಾವು ರೂಪಿಸಿಕೊಳ್ಳುವ ಒಂದು ಪ್ರಯತ್ನವನ್ನು ಕವಿ ಮಾಡಿದ್ದಾರೆ. ಬಸವಣ್ಣನವರ ವಚನಗಳ ಮೂಲಕ ವಚನ ಚೇತನದರ್ಶನ ಮಾಡಿಸುತ್ತಾರೆ. ವಚನಗಳು 'ಬದುಕುವ ಮಾರ್ಗಗಳು' ಎಂದು ಕವಿ ತಿಳಿಸುತ್ತಾರೆ. ಬಸವಣ್ಣನವರ ಲಿಂಗಪೂಜೆ, ಭಕ್ತಿ0ಯ ಕಳೆ0ಯನ್ನು ವರ್ಣಿಸುತ್ತಾರೆ. ಅನುಭವ ಮಂಟಪದ ಚಿತ್ರವನ್ನು ಸೊಗಸಾಗಿ

ಚಿತ್ರಿಸಿದ್ದಾರೆ. ಬಸವಣ್ಣನವರು 'ಕಾಯಕ-ದಾಸೋಹ' ತತ್ವಗಳನ್ನು ಮಂತ್ರದಂಡದಂತೆ ಬಳಸಿದರೆಂದು ಅರುಹುತ್ತಾರೆ. ಮೂಢನಂಬಿಕೆಗಳಿಂದ ಜನತೆಯನ್ನು ಹೊರಗೆ ಕರೆತರುವ ಪ್ರಯತ್ನವನ್ನು ಮಾಡುತ್ತಾರೆ. ಜ್ಞಾನ-ಭಕ್ತಿ, ಅಜ್ಞಾನ-ಸುಜ್ಞಾನ ದಯೆ-ಧರ್ಮ, ಕಾಯಕ-ದಾಸೋಹ, ಸ್ಥಾವರ-ಜಂಗಮ, ಆಚಾರ-ಅನಾಚಾರ, ಅಂತರಂಗ-ಬಹಿರಂಗ ಶುದ್ಧಿ, ಇಷ್ಟಲಿಂಗದೀಕ್ಷೆ, ಶಿಕ್ಷಣ, ಸಮತಾವಾದ, ಲೋಕಹಿತ ಸತ್ಯನಿಷ್ಠೆ, ಸಕಲ ಜೀವ ದಯಾಪರತೆ, ಅನುಭವ ಮಂಟಪ ಮತ್ತು ಪ್ರಜಾಪ್ರಭುತ್ವದ ವಿಚಾರ ಶ್ರಮ ಸಂಸ್ಕೃತಿ, ಶರಣ ಸಂಸ್ಕೃತಿಯ ವಿಚಾರಗಳು ಪ್ರಸ್ತುತ ಮಹಾಕಾವ್ಯದಲ್ಲಿ ಮೂಡಿಬಂದಿವೆ.

ಬಸವಣ್ಣನವರು ಇಷ್ಟಲಿಂಗದೀಕ್ಷೆಯ ಜೊತೆಗೆ ಮಹಾಮನೆಯಲ್ಲಿ ಜ್ಞಾನದೀಕ್ಷೆಯನ್ನು ನೀಡಿದರೆಂದು ಕವಿ ವ್ಯಕ್ತಪಡಿಸುತ್ತಾರೆ. "ಯುಗಾವತಾರಿ ನಮ್ಮ ಬಸವಣ್ಣ ಜಗಜ್ಯೋತಿ" ಯಾದನೆಂದು ತಿಳಿಸುತ್ತಾರೆ. ಬಸವಣ್ಣನವರ ಆಧ್ಯಾತ್ಮ ರಾಜ್ಯಕ್ಕೆ ಗಡಿಗಳಲ್ಲ, ಭಾಷೆ, ಕುಲ, ಜಾತಿ, ಮತ, ಲಿಂಗವನ್ನು ಮೀರಿದ ಭಕ್ತಿ ಸಾಮ್ರಾಜ್ಯವೆಂದು ಕರೆಯುತ್ತಾರೆ. ಕಾಯಕವೇ ಕೈಲಾಸವಾಗುತ್ತದೆ. ಜ್ಞಾನಾಂದೋಲನವೇ ಭಕ್ತಿಯಾಗುತ್ತದೆ. ಆ ಮೂಲಕ ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಲಾಗುತ್ತದೆ. ಮಾನವೀಯತೆಯ 'ಮಾನವ ಧರ್ಮವೇ' ಹಿರಿದಾದುದು ಎಂದು ಕವಿ ಚಿತ್ರಿಸಿದ್ದಾರೆ. "ಬಸವ ದಾರಿಯೆ ಹರಧರ್ಮ, ಲಿಂಗಧರ್ಮ, ಶಿವಧರ್ಮ, ಬಸವಧರ್ಮ" ಎನ್ನುತ್ತಾರೆ. ಯುಗಕಲ್ಪಮಾನದಲ್ಲಿ ಸತ್ಯ ಅಸತ್ಯ, ಧರ್ಮ ಅಧರ್ಮ, ನಂಬಿಕೆ ಅಪನಂಬಿಕೆ, ಆಣೆ ಪ್ರಮಾಣ, ಹುನ್ನಾರ, ನಯವಂಚಕತೆ ಅಟ್ಟಹಾಸಕೆ ಬಸವಣ್ಣನು "ಭವರೋಗದ ವೈದ್ಯ" ಎಂದು ಕವಿ ಕರೆದಿದ್ದಾರೆ. ಭಕ್ತಿ ಶಕ್ತಿಯ ಸಮರಸ ದಾನಂದದ ಪೂರ್ಣತ್ವದ ಅರಿವು ಮೂಡಿಸಿದ ಬಸವಣ್ಣನವರನ್ನು ಕವಿ 'ಪವಾಡ ಪುರುಷ'ನೆಂಬುದನ್ನು ನಿರಾಕರಿಸುತ್ತಾರೆ.

ಲತಾ ರಾಜಶೇಖರ್‌ವರು ಬರೆದ 'ಬಸವ ಮಹಾದರ್ಶನ' ಮಹಾಕಾವ್ಯ ಮುಕ್ತ ಛಂದಸ್ಸಿನ ಕೃತಿ0ಯಾಗಿದೆ. ಚಂಪೂ ಸಾಹಿತ್ಯದಲ್ಲಿ ಗದ್ಯದ ಬರವಣಿಗೆ ಬರುತ್ತದೆ. ಹಾಗೆ ಇವರದು ರಗಳೆ ಮಾದರಿ. ಬುದ್ಧ, ಏಸು, ಬಸವೇಶ್ವರ, ಮಹಾವೀರ, ರಾಮ ಸೇರಿ ಒಟ್ಟು ಐದು ಮಹಾಕೃತಿಗಳನ್ನು ಬರೆದ ಶ್ರೇಯಸ್ಸು ಲತಾ ರಾಜಶೇಖರ್ ಅವರಿಗೆ ಸಲ್ಲುತ್ತದೆ. ಈ ಕಾವ್ಯಕೃತಿಯು ಬಸವಣ್ಣನವರ ಜೀವನ ಮತ್ತು ಸಾಧನೆಗಳ ದರ್ಶನ ಪಥವನ್ನು ಸೂಚಿಸುತ್ತದೆ. 12 ಸಂಪುಟಗಳಲ್ಲಿ 267 ಸೋಪಾನಗಳನ್ನು ಒಳಗೊಂಡಿದೆ. 1400 ಪುಟಗಳಷ್ಟು ವ್ಯಾಪ್ತಿಯನ್ನು ಹೊಂದಿದೆ. ಕಾವ್ಯದ ಹೇಳಿಕೆಗಳನ್ನು ಸಮರ್ಥಿಸುವಲ್ಲಿ ಆಯಾ ಸನ್ನಿವೇಶಕ್ಕೆ ತಕ್ಕಂತ ಶರಣರ ವಚನಗಳನ್ನು ಬಳಸಿಕೊಳ್ಳಲಾಗಿದೆ.

ಸಮಾಜದಲ್ಲಿರುವ ಅಸ್ಪೃಶ್ಯತೆ ಜಾತೀಯತೆಯನ್ನು ಮಟ್ಟಹಾಕಲು ಬಸವಣ್ಣನವರು ಅವತರಿಸಿ ಬಂದರು ಎಂದು ಕವಯಿತ್ರಿ ಗ್ರಹಿಸಿದ್ದಾರೆ. ಇದನ್ನೆಲ್ಲಾ ತೊಡೆದು ಹಾಕುವುದಕ್ಕಾಗಿಯೇ ಬಸವಣ್ಣನವರ ಬದುಕು ರೂಪಗೊಂಡಿತು ಎಂದು ಕೃತಿಯಲ್ಲಿ ನಿರೂಪಿಸುತ್ತಾ ಹೋಗುತ್ತಾರೆ. ಎಲ್ಲ ಕಡೆ ಬಸವಣ್ಣನವರನ್ನು ಧರ್ಮದ ನಿ0ಯಂತ್ರಣದಿಂದ ಸಡಿಲಗೊಳಿಸಿ ಉದಾರವಾಗಿರುವಂತೆ ಪಾತ್ರ ಚಿತ್ರಣ ಮಾಡುತ್ತಾ ಹೋಗುತ್ತಾರೆ. ಧರ್ಮದ ಎಲ್ಲ ನಿಷೇಧಗಳು ಅವರ ಬದುಕಿನಿಂದ ದೂರವಾಗಿವೆ. ಪ್ರೀತಿ ಮತ್ತು ಸಾಮರಸ, ಸಮಾನತೆ ತತ್ವ ಇದೇ ಮುಖ್ಯ ಎಂಬ ತಳಹದಿಯ ಮೇಲೆ ಬಸವಣ್ಣನವರ ಪಾತ್ರವನ್ನು ಕಂಡರಿಸಿದ್ದಾರೆ.

ಶೂದ್ರರು, ಅಸ್ಪೃಶ್ಯರ ಕೇರಿಗೆ ಹೋಗಿ ಅಲ್ಲಿಯ ಸ್ಥಿತಿಗತಿ ತಿಳಿದು ಅಲ್ಲಿನ ಲೋಪದೋಷಗಳಿಗೆ ಸ್ಪಂದಿಸಿ ಗುಣಾತ್ಮಕವಾದ ಆಡಳಿತ ಕೊಡುತ್ತಾರೆ. ದೇವಾಲಯ ನಿರ್ಮಾಣಕ್ಕಿಂತ ಆರೋಗ್ಯ ಮತ್ತು ನೈರ್ಮಲ್ಯದ ಅಗತ್ಯವನ್ನು, ವಿದ್ಯೆಯ ಮಹತ್ವವನ್ನ ಪ್ರತಿಪಾದಿಸುತ್ತಾರೆ. ಆಧುನಿಕ ಚಿಂತನೆಗಳನ್ನು ಕವಯಿತ್ರಿ ತಂದಿದ್ದಾರೆ. ಭಕ್ತಿ, ಧರ್ಮ, ಕಾಯಕ ಇವು ಮನುಷ್ಯನಿಗೆ ಸಮಾನತೆ ಸಂತೋಷ, ಸಾಮರಸ್ಯ ಕೊಡುವ ತ್ರಿವಿಧ ಸೂತ್ರಗಳು ಎಂದು 'ಬಸವ ಮಹಾದರ್ಶನ' ಹೇಳುತ್ತದೆ. ಬಸವಣ್ಣನವರಿಗೆ ಶೋಷಿತರನ್ನು ಧರ್ಮದ ಪರಿಧಿಗೆ ತರಬೇಕು ಎನ್ನುವ ಮಾನವೀಯ ಕಾಳಜಿ ಎದ್ದು ಕಾಣುತ್ತದೆ. ಲಿಂಗ ಧಾರಣೆಯ ಮೂಲಕ ಧರ್ಮ ಮತ್ತು ಶುಚಿತ್ವ ಅನುಭಾವದ ಮೂಲಕ ಸಮಾನತೆ, ವಿದ್ಯೆ, ದಾಸೋಹ, ಕಾಯಕದ ಗೌರವಗಳನ್ನು ಇಲ್ಲಿ ಕಾಣಿಸಲಾಗಿದೆ. ಈ ಕಾವ್ಯದಲ್ಲಿ ಪವಾಡಗಳ ಅಗತ್ಯವಿಲ್ಲವೆಂದು ಕಾಯಕ ಚಿಂತನೆ, ಸಮಾನತೆ ಇವೇ 21ನೇ ಶತಮಾನದ ಮುಖ್ಯ ವಿಷಯಗಳೆಂದು ಕವಿಯಿತ್ರಿ ಸ್ವೀಕರಿಸಿದ್ದಾರೆ. ಬಸವಣ್ಣನವರಿಗೆ ದೇವರು, ಧರ್ಮಕ್ಕಿಂತ ಮುಖ್ಯವಾಗಿ ಸಾಮಾಜಿಕ ಸಮಾನತೆ ಪಡೆಯುವುದೆ ಪ್ರಧಾನ ಆಶಯವಾಗಿ ಕಂಡುಬರುತ್ತದೆ.

ಜಿ. ಎಚ್. ಹನ್ನೆರಡಮಠರವರ 'ಶ್ರೀ ಬಸವ ಕಾವ್ಯ ದರ್ಶನಂ'. ಇದರಲ್ಲಿ ಐದು ಗ್ರಂಥಗಳು ಅಡಕವಾಗಿವೆ. ಬಸವಣ್ಣನವರ ಜೀವನದ ಪ್ರಮುಖವಾದ ಐದು ಘಟ್ಟಗಳೆ ಈ ಐದು ಗ್ರಂಥಗಳ ಕಥಾವಸ್ತು, ಆಧುನಿಕ ಛಂದೋಬಂಧದಲ್ಲಿ ರಚಿತವಾದ ಈ ಕಾವ್ಯದಲ್ಲಿ ನಾಲ್ಕು ಚರಣಗಳ ಸುಮಾರು 1500 ಪದ್ಯಗಳು ಅಡಕವಾಗಿವೆ. ಮಧ್ಯದಲ್ಲಿ ಕೆಲವು ರಗಳೆಗಳೂ ಷಟ್ಪದಿಗಳು ಪಡಿಮೂಡಿವೆ. ಬಸವಣ್ಣನವರು ವೈವಿಧ್ಯಮಯವಾದ ಆತ್ಮ ಪ್ರಭೆಯನ್ನು ಒಳಗೊಂಡಂತ ಕಾರಣಿಕ ಪುರುಷ ಎನ್ನುತ್ತಾರೆ. ಬಸವಣ್ಣನವರಲ್ಲಿ ಶಾಂತಿಯಿದೆ. ಕ್ರಾಂತಿಯಿದೆ. ಭಕ್ತಿಯೊಂದಿಗೆ ಜ್ಞಾನವಿದೆ. ಆತ್ಮದರ್ಶನದೊಂದಿಗೆ ಲೋಕದರ್ಶನವಿದೆ. ಅನುಭಾವದೊಂದಿಗೆ ಸಾಹಿತ್ಯವಿದೆ. ದೇವತ್ವದೊಂದಿಗೆ ಮಾನವೀಯತೆಯಿದೆ ಎಂದು ಅವರ ಅಂತರಂಗದ ಘನವ್ಯಕ್ತಿತ್ವವನ್ನು ಬೆಳಕಿಗೆ ತಂದಿದ್ದಾರೆ. ಬಸವಣ್ಣನವರನ್ನು ಯಾವುದೇ ಪವಾಡಗಳಿಗೆ ಸಿಲುಕಿಸದೇ, ಪ್ರಾಚೀನ ಹಾಗೂ ಆಧುನಿಕ ವಿಚಾರ ಕ್ರಾಂತಿಗಳಿಗೆ ತತ್ವ ನಿಷ್ಠರಾಗಿ ಮೂಡಿಬಂದ ಕಾರಣ ಪುರುಷರು ಎಂದು ಕವಿ ಚಿತ್ರಿಸಿದ್ದಾರೆ.

ಬಿ. ಸಿದ್ಧಗಂಗಯ್ಯ ಕಂಬಾಳುರವರ 'ಬಸವ ದರ್ಶನ'. ಬಸವೇಶ್ವರ, ಅಕ್ಕಮಹಾದೇವಿ, ಅಲ್ಲಮಪ್ರಭು ಮುಂತಾದ ಮಹಾಶರಣರ ಪ್ರಭಾವಕ್ಕೆ ಒಳಗಾದವರು ಕವಿ ಸಿದ್ಧಗಂಗಯ್ಯನವರು. ಬಸವಾದಿ ಪ್ರಮಥರ ಜೀವನ ಅನುಭವಗಳನ್ನು ನಮ್ಮೆಲ್ಲರಿಗೆ ಸರಳವಾಗಿ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಲಯಬದ್ಧ, ಚೌಪದಿಗಳಲ್ಲಿ ಕೃತಿಯನ್ನು ಬರೆದಿದ್ದಾರೆ. ಬಸವಣ್ಣನವರ ವ್ಯಕ್ತಿತ್ವವನ್ನು ಕಲಾವಿದರ ಮತ್ತು ಕೆಳಸ್ತರದ ಜನರ ಮೂಲಕ ನೋಡುವ ಆಶಯದಿಂದ ಈ ಕಥನ ಗೀತೆ ರಚಿಸಿದೆ ಎಂದು ಕವಿ ಹೇಳಿಕೊಳ್ಳುತ್ತಾರೆ. ಬಸವಾದಿ ಶರಣರು ಅವತಾರ ಪುರುಷರಲ್ಲ. ಮನುಷ್ಯರ ನಡುವೆಯೇ ಹುಟ್ಟಿ ಮನುಕುಲದ ಸಂಕಟಗಳನ್ನು ಕುರಿತು ಚಿಂತಿಸಿದರು. ಅವುಗಳಿಗೆ ಪರಿಹಾರ ಮಾರ್ಗಗಳನ್ನು ಹುಡುಕುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರೆಂದು ಅಭಿವ್ಯಕ್ತಿಸಿದ್ದಾರೆ.

ಬಸವಣ್ಣನವರು ತನ್ನ ಕುಲವನ್ನು ಕೆಳವರ್ಗದ ಜನರೊಡನೆ ಗುರುತಿಸಿಕೊಂಡು, ದೈವಾಂಶ ಸಂಭೂತವೆಂಬುದನ್ನು ಸುಳ್ಳಾಗಿಸಿಕೊಂಡಿದ್ದಾರೆಂದು ಕವಿ ನುಡಿ0ಯುತ್ತಾರೆ. ಮಹಾದಾರ್ಶನಿಕನಾದ ಬಸವಣ್ಣನನ್ನು ದೇವರಲ್ಲ ಎಂದು ಭಾವಿಸಿದರೆ ಮುಂದಿನ ಪೀಳಿಗೆ ಆತನನ್ನು ಎಲ್ಲಿ ಮರೆತು ಬಿಡುತ್ತಾರೆಯೋ ಎಂಬ ಶಂಕೆ ವೀರಶೈವ ಕವಿಗಳಿಗೆ ಕಾಡಿರಬಹುದೆಂದು ಕವಿ ಹೇಳುತ್ತಾರೆ. ನಮಗೀಗ ದೇವರುಗಳು ಅವತಾರವೆತ್ತಿ ಬರುವುದು ಬೇಡವಾಗಿದೆ. ಬಸವಣ್ಣನಂತಹ ಅಪ್ಪಟ ಮನುಷ್ಯನ ಅಗತ್ಯವಿದೆ ಎಂದು ಕವಿ ತಮ್ಮ ಆಸೆಯನ್ನು ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಒಟ್ಟು 21 ಅಧ್ಯಾಯಗಳಿವೆ. ಬಸವಣ್ಣನವರೊಂದಿಗೆ ಅಲ್ಲಮ, ಬೊಮ್ಮಯ್ಯ, ಮಡಿವಾಳ ಮಾಚಿದೇವ, ಬಹುರೂಪಿ

ಚೌಡಯ್ಯ ಹಲವಾರು ಶರಣರ ವ್ಯಕ್ತಿತ್ವವನ್ನು ಕವಿ ಪರಿಚಯಿಸಿದ್ದಾರೆ. ಹೀಗೆ ಆಧುನಿಕ ಕವಿಗಳು ವರ್ತಮಾನಕ್ಕನುಗುಣವಾಗಿ ಬಸವಣ್ಣನವರ ಪಾತ್ರವನ್ನು ಪುನಃ ಸೃಷ್ಟಿಸಿದ್ದಾರೆ. ಬಸವಣ್ಣನವರನ್ನು ಯಾವುದೇ ಅವತಾರ ಪುರುಷರನ್ನಾಗಿ, ಪವಾಡ ಪುರುಷರನ್ನಾಗಿ ಚಿತ್ರಿಸದೆ, ಸ್ವತಂತ್ರ್ಯ, ಸಮಾನತೆ, ಮಾನವೀಯತೆಯನ್ನು ಬಯಸುವ ಪ್ರಧಾನ ವ್ಯಕ್ತಿಯನ್ನಾಗಿ ಕಂಡರಿಸಿದ್ದಾರೆ. ಆಧುನಿಕ ಕವಿಗಳು ಬಸವಣ್ಣನವರು ಕಾಯಕ ಜೀವಿಗಳು, ದಾಸೋಹಿಗಳು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಸಮಾಜಶಾಸ್ತ್ರಜ್ಞವೆಂದು, ಅರ್ಥಶಾಸ್ತ್ರಜ್ಞನೆಂದು, ವೈದ್ಯನೆಂದು ಸಂಘಟನಾಕಾರನನ್ನಾಗಿ ವಿಭಿನ್ನ ನೆಲೆಯಲ್ಲಿ ಅವರ ವ್ಯಕ್ತಿತ್ವವನ್ನು ಗುರುತಿಸಿದ್ದಾರೆ.

**ಆಧಾರ ಗ್ರಂಥಗಳು**


1. ಶ್ರೀ ಬಸವರಾಜ ತುಪ್ಪದ 'ಶ್ರೀ ಬಸವ ದರ್ಶನಂ'
2. ಡಾ. ಆರ್.ಸಿ.ಮುದ್ದೇಬಿಹಾಳ 'ಬಸವ ಬೆಳಗು'
3. ಜಿ.ಎಚ್.ಹನ್ನೆರಡಮಠ 'ಶ್ರೀ ಬಸವ ಕಾವ್ಯ ದರ್ಶನ'
4. ನಿರುಪಾಧೀಶ ಸ್ವಾಮಿಗಳು 'ಶ್ರೀ ಸಂಗನಬಸವ ವಿಜಯ'
5. ಬಿ. ಸಿದ್ಧಗಂಗಯ್ಯ ಕಂಬಾಳ 'ಬಸವ ದರ್ಶನ'
6. ಡಾ. ಪ್ರದೀಪಕುಮಾರ ಹೆಬ್ರಿ 'ಯುಗಾವತಾರಿ'
7. ಡಾ. ಲತಾ ರಾಜಶೇಖರ 'ಬಸವ ಮಹಾದರ್ಶನ'